ಬ್ಯಾಂಕ್ ಪ್ರಕರಣಗಳು, ಭೂಸ್ವಾದೀನ ಪ್ರಕರಣಗಳನ್ನು ಹಾಗೂ ಕಾರ್ಮಿಕ ವಿವಾದ ಪ್ರಕರಣಗಳನ್ನು ತರುವ ಬಗ್ಗೆ ಪರಿಶೀಲಿಸಲಾಗುತ್ತಿದೆ. ಇದಲ್ಲದೇ ಕಾನೂನು ನೆರವು ಕಾರ್ಯಕ್ರಮಗಳ ಪ್ರಯೋಜನ ಹೆಚ್ಚು ಜನರಿಗೆ ಕಲ್ಪಿಸುವ ಉದ್ದೇಶದಿಂದ ಕಾನೂನು ವಿದ್ಯಾಪ್ರಸಾರ ಕಾರ್ಯಕ್ರಮಗಳನ್ನು ತೀವ್ರಗೊಳಿಸಲಾಗುತ್ತಿದೆ.

ಡೀಸಲ್ ಮತ್ತು ಪೆಟ್ರೋಲ್ ಬಳಕೆ ಕುರಿತು

450(660). ಶ್ರೀ ಜಿ. ರಾಜುಗೌಡ (ಹನೂರು):- ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಕಳೆದ ವರ್ಷಕ್ಕಿಂತ ಈ ವರ್ಷ ಡೀಸೆಲ್ ಮತ್ತು ಪೆಟ್ರೋಲ್ ಬಳಕೆ ಶೇಕಡಾ ಎಷ್ಟು ಹೆಚ್ಚಾಗಿರುತ್ತದೆ?

ಆ) ನಕಲಿ ಲೂಬ್ರಿಕೇಟ್ ತೈಲ ಮತ್ತು ಗ್ರೀಸ್ ಮಾರಾಟದಿಂದ ಉಂಟಾಗಿರುವ ದುಷ್ಪರಿಣಾಮಗಳು ಯಾವುವು? ಇದನ್ನು ತಡೆಗಟ್ಟಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):-

ಅ) ಕಳೆದ ವರ್ಷಕ್ಕೆ ಹೋಲಿಸಿದಲ್ಲಿ ಈ ವರ್ಷ ಪೆಟ್ರೋಲ್ ಮತ್ತು ಡೀಸೆಲ್ ಬಳಕೆ ಕ್ರಮವಾಗಿ ಶೇಕಡ 2.1 ಮತ್ತು 5.3 ರಷ್ಟು ಹೆಚ್ಚಾಗಿರುತ್ತದೆ.

ಆ) ನಕಲಿ ಲೂಬ್ರಿಕೇಟಿಂಗ್ ತೈಲ ಮತ್ತು ಗ್ರೀಸ್ ಮಾರಾಟದಿಂದ ಹಾಗೂ ಅವುಗಳನ್ನು ಯಂತ್ರಗಳಿಗೆ ಬಳಸುವುದರಿಂದ ಯಂತ್ರೋಪಕರಣಗಳು ಹಾಳಾಗುತ್ತವೆ, ಹಾಗೂ ಉತ್ಪಾದನೆಯು ನಷ್ಟದಲ್ಲಿ ಪರಿಣಮಿಸುವುದು, ಅಲ್ಲದೆ ಇದನ್ನು ಉಪಯೋಗಿಸುವುದರಿಂದ ಇಂತಹ ಯಂತ್ರಗಳ ಸಂಪರ್ಕ ಹೊಂದುವವರ ಆರೋಗ್ಯದ ಮೇಲೆ ದುಷ್ಪರಿಣಾಮಗಳು ಬೀರುತ್ತವೆ. ಈ ತೈಲಗಳನ್ನು ಯಂತ್ರಗಳಿಗೆ ಹಾಗೂ ವಾಹನಗಳಿಗೆ ಬಳಸಿದಲ್ಲಿ ಪರಿಸರ ಮಾಲಿನ್ಯವು ಸಹ ಉಂಟಾಗುತ್ತದೆ. ಇಂತಹ ನಕಲಿ ತೈಲಗಳನ್ನು ಉಪಯೋಗಿಸುವುದನ್ನು ತಡೆಗಟ್ಟಲು ಕೇಂದ್ರ ಸರ್ಕಾರವು ಆಗತ್ಯ ವಸ್ತುಗಳ ಕಾಯಿದೆ ೧೯೫೫ರ ಆಡಿಯಲ್ಲಿ ಲೂಬ್ರಿಕೇಟಿಂಗ್ ತೈಲ ಮತ್ತು ಗ್ರೀಸ್ ನಿಯಂತ್ರಣ ಆದೇಶವನ್ನು ಹೊರಡಿಸಿದ್ದು, ಇಂತಹ ತೈಲಗಳಲ್ಲಿ ವ್ಯವಹರಿಸಲು ಇಚ್ಛಿಸುವ ವ್ಯಕ್ತಿ ನಿರ್ದೇಶಕು, ಕೈಗಾರಿಕೆ ಮತ್ತು ವಾಣಿಜ್ಯ ಇವರಿಂದ ಆಗತ್ಯ ಲೈಸೆನ್ಸ್ ಪಡೆಯಲೇ ಬೇಕಾಗುತ್ತದೆ. ಆದರೆ, ಕರ್ನಾಟಕದ ಉಚ್ಛ ನ್ಯಾಯಾಲಯವು ಸದರಿ ಕೇಂದ್ರ ಸರ್ಕಾರದ ಆದೇಶಕ್ಕೆ ತಡೆಯಾಜ್ಞೆಯನ್ನು ನೀಡಿರುತ್ತದೆ.

ಮೈಸೂರು ಮತ್ತು ತುಮಕೂರು ಜಿಲ್ಲೆಗೆ ವಿದ್ಯುತ್ ಸರಬರಾಜು ಮಾಡಿದ ಪಂಪುಸೆಟ್ಟುಗಳ ಸಂಖ್ಯೆ

452(667). ಶ್ರೀ ಜಿ. ರಾಜುಗೌಡ (ಹನೂರು):- ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಮೈಸೂರು ಮತ್ತು ತುಮಕೂರು ವಿದ್ಯುಚ್ಛಕ್ತಿ ವಲಯಗಳಲ್ಲಿ ಬರುವ ಯಾವ ಯಾವ ತಾಲ್ಲೂಕುಗಳಲ್ಲಿ ಎಷ್ಟೆಷ್ಟು ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡಲಾಗಿದೆ?

ಆ) 1ನೇ ಏಪ್ರಿಲ್ 1991 ರಿಂದ 31ನೇ ಜನವರಿ 1992ರವರೆಗೆ ಇದಕ್ಕಾಗಿ ಎಷ್ಟು ಯೂನಿಟ್ ವಿದ್ಯುಚ್ಛಕ್ತಿ ಸರಬರಾಜಾಗಿದೆ?

ಇ) ರೈತರಿಗೆ ವಿದ್ಯುತ್ತನ್ನು ರಿಯಾಯಿತಿ ದರದಲ್ಲಿ ಕೊಡುತ್ತಿರುವುದರಿಂದ ಸರ್ಕಾರದಿಂದ ವಿದ್ಯುಚ್ಛಕ್ತಿ ಮಂಡಳಿಯು ಮೇಲ್ಕಂಡ ಎರಡು ವಲಯಗಳಿಗಾಗಿ ಎಷ್ಟು ಸಹಾಯಧನ ಪಡೆದುಕೊಂಡಿದೆ?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು):-